# ಚನ್ನರಾಯಪಟ್ಟಣದ ಸಿವಿಲ್ ಜಡ್ಜ್ (ಕಿ.ವಿ) ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯ್ಯಾಲಯದಲ್ಲಿ

ಸಿ.ಮಿಸ್. 389/2010

| **ಅರ್ಜಿದಾರರು** | ವಿ | **ರೆಸ್ಪಾಂಡೆಂಟರು** |
|---|---|---|
| ದಿವ್ಯಾರಾಣಿ | | ವಿಮಲ್ ಕುಮಾರ್ ಮತ್ತು ಇತರರು |

## ೧ ಮತ್ತು ೨ ನೇ ರೆಸ್ಪಾಂಡೆಂಟರು ಸಲ್ಲಿಸುತ್ತಿರುವ ಅರ್ಜಿದಾರರ ಅರ್ಜಿಯ ಬಗ್ಗೆ ತಕರಾರು

೧. ಅರ್ಜಿದಾರರು ಅರ್ಜಿಯನ್ನು ಕಾನೂನು ರೀತಿಯಲ್ಲಿ ಹಾಕಿರುವುದಿಲ್ಲ, ಅರ್ಜಿಯಲ್ಲಿನ ಆರೋಪಗಳಲ್ಲಿ ಸ್ಪಷ್ಟತೆ, ನಿಖರತೆ, ಸ್ವಾಭಾವಿಕತೆ, ಸಹಜತೆ, ಶುದ್ದತೆ ಇರುವುದಿಲ್ಲ. ಅರ್ಜಿದಾರರು ಸುಳ್ಳು ವಿಚಾರಗಳನ್ನು ಹೇಳಿ ಅರ್ಜಿ ಹಾಕಿರುತ್ತಾರೆ. ಅರ್ಜಿದಾರರು ಶುದ್ದಹಸ್ತದಿಂದ ಮಾನ್ಯ ನ್ಯಾಯಾಲಯಕ್ಕೆ ಅರ್ಜಿಯನ್ನು ನೀಡಿರುವುದಿಲ್ಲ. ಅರ್ಜಿಯು ಕಾನೂನಿನ ಅನುಸಾರ ಮತ್ತು ಉಬಯ ಪಾರ್ಟಿಗಳ ನಡುವೆ ಇರುವ ವಾಸ್ತವಿಕ ಸಂಬಂದದ ಹಿನ್ನೆಲೆಯಲ್ಲಿ ಅನೂರ್ಜಿತವಾಗಿರುತ್ತದೆ. ಅರ್ಜಿಯು ಕಾನೂನು ದುರ್ಬಳಕೆ ಮಾಡಿಕೊಳ್ಳಲು ಸಲ್ಲಿಸಿರುವುದಾಗಿರುತ್ತದೆ.

೨. **ಅರ್ಜಿಯ ೧ ನೇ ಪ್ರಸ್ತಾವನೆಯಲ್ಲಿನ ವಿಚಾರದಲ್ಲಿ ಈ ರೆಸ್ಪಾಂಡೆಂಟರ ತಕರಾರು ಇರುವುದಿಲ್ಲ , ಆದರೆ** ಅರ್ಜಿದಾರರ ವಯಸ್ಸು ೨೫ ವರ್ಷವಾಗಿದ್ದು ವಯಸ್ಸಿನಲ್ಲಿಯೇ ಸುಳ್ಳು ಹೇಳಿ, ಅನುಕಂಪವನ್ನು ಹೊಂದುವ ಮೊದಲನೇ ಪ್ರಯತ್ನವನ್ನು ಮಾಡಿರುತ್ತಾರೆ. ಹಾಗೆಯೇ ೨ನೇ ರೆಸ್ಪಾಂಡೆಂಟರು ೭೦ ವರ್ಷದ ವಯೋವೃದ್ದರಾಗಿದ್ದು ಅರ್ಜಿದಾರರು ಅವರ ವಯಸ್ಸನ್ನು ಅರ್ಜಿಯಲ್ಲಿ ಸುಳ್ಳು ಹೇಳಿರುತ್ತಾರೆ. ಅರ್ಜಿದಾರರಿಗೆ ಮತ್ತು ೩ ಮತ್ತು ೪ ನೇ ರೆಸ್ಪಾಂಡೆಂಟರಿಗೆ ಯಾವುದೇ ರಕ್ತ ಸಂಬಂದವಾಗಲೀ, ವ್ಯವಹಾರಿಕಾ ಸಂಬಂದವಾಗಲೀ, ಸಾಕು ಸಲಹುವಿಕೆಯ ಸಂಬಂದವಾಗಲೀ ಇರುವುದಿಲ್ಲ. ಅವರನ್ನು ಇಲ್ಲಿ ಪಕ್ಷಕಾರರನ್ನಾಗಿಸಿ ಅವರಿಗೆ ಹಿಂಸೆ ನೀಡುವುದರಲ್ಲಿ ಅರ್ಜಿದಾರರ ದುರುದ್ದೇಶ ಅಡಗಿದೆ.

೩. **ಅರ್ಜಿಯ ೨ ನೇ ಪ್ರಸ್ತಾವನೆಯಲ್ಲಿನ ವಿಚಾರದಲ್ಲಿ ಈ ರೆಸ್ಪಾಂಡೆಂಟರ ತಕರಾರು ಹೀಗಿರುತ್ತದೆ.** ೧ ನೇ ರೆಸ್ಪಾಂಡೆಂಟರು ಅರ್ಜಿದಾರರ ಗಂಡನಾಗಿರುವುದು ನಿಜವಾದರೂ ಅರ್ಜಿದಾರರು ೧ನೇ ರೆಸ್ಪಾಂಡೆಂಟರ ಜೊತೆ ಕೇವಲ ಸುಮಾರು ೨೫ ದಿನ ಒಲ್ಲದ ಮನಸ್ಸಿನ ಮಾನಸಿಕ ಸ್ಪಂದನೆಯಿಲ್ಲದ ಸಂಸಾರ ಮಾಡಿ, ತವರಿನ ಸಿರಿಗೆ ಆಸೆಪಟ್ಟು, ಗಂಡನನ್ನು ಸಾಕು ತಾಯಿಯನ್ನ್ನು ಹೊರಹಾಕಿ ಮನೆ ಮಾರಿ ದುಡ್ಡು ತಗೊಂಡು ತನ್ನ ತವರಿಗೆ ಬಂದರೆ ಸಂಸಾರ ಮಾಡುವುದಾಗಿ ಬೆದರಿಸಿ, ಗಂಡನು ಒಪ್ಪದ ಕಾರಣ ಇಲ್ಲದ ಆರೋಪಗಳನ್ನು

ಮಾಡುತ್ತ ತವರಿಗೆ ಹೋಡಿ ಹೋಗಿರುತ್ತಾರೆ. ಮನೆಯನ್ನು ಮಾರಲು ಅದು ೨ನೇ ರೆಸ್ಪಾಂಡೆಂಟರ ಸ್ವಯಾರ್ಜಿತ ಸ್ವತ್ತಾಗಿದ್ದು ಅದರಲ್ಲಿ ಸಾಕು ಮಗನಾದ ೧ ನೇ ರೆಸ್ಪಾಂಡೆಂಟರ ಹಕ್ಕು ಇಲ್ಲವಾಗಿ ಅದರಲ್ಲಿ ಮನೆಯಲ್ಲಿ ಇಲ್ಲದ ಗೊಂದಲ ಸೃಷ್ಟಿಸಿ ಅರ್ಜಿದಾರರು ತವರಿಗೆ ಹೋಗಿರುತ್ತಾರೆ.

೪. ೨ ನೇ ರೆಸ್ಪಾಂಡೆಂಟರು ೧ ನೇ ರೆಸ್ಪಾಂಡೆಂಟರ ಸಾಕು ತಾಯಿಯಾಗಿರುತ್ತಾರೆ. ಈ ಸಾಕು ತಾಯಿಯ ಅರ್ಥದಲ್ಲಿ ಅರ್ಜಿದಾರರಿಗೆ ಅತ್ತೆಯಾಗಲು ಮುಂದಾದರೆ ಹೊರತು ಅರ್ಜಿದಾರರು ಅಂತಹ ಸ್ಥಾನಕ್ಕೆ ತಕ್ಕ ನಡತೆಯನ್ನು ತೋರಿ/ಸ್ಪಂದಿಸಿ ಸ್ವೀಕರಿಸಿರುವುದಿಲ್ಲ.

೫. ೧ ಮತ್ತು ೨ ನೇ ರೆಸ್ಪಾಂಡೆಂಟರು ೩ ಮತ್ತು ೪ ನೇ ರೆಸ್ಪಾಂಡೆಂಟರುಗಳ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂಬುದು ಅಪೂರ್ಣವಾದ ವಿವರವನ್ನು ಅರ್ಜಿದಾರರು ನೀಡಿರುತ್ತಾರೆ. ಕೆಲಸವೆಂದರೆ ನಿರ್ದಿಷ್ಟ ಕೆಲಸದ ಗುತ್ತಿಗೆ ಆದಾರದ ಕೂಲಿ ಕೆಲಸವಾಗಿರುತ್ತದೆ. ಕೆಲಸವು ಪರ್ಮನೆಂಟೂ ಅಲ್ಲ ಟೆಂಪರ್ವರಿಯೂ ಅಲ್ಲ. ಸದರಿ ಸಂಸ್ಥೆ ೩ ಮತ್ತು ೪ ರೆಸ್ಪಾಂಡೆಂಟರ ಶಿಕ್ಷಣ ಸಂಸ್ಥೆಯೂ ಅಲ್ಲ. ಸದರಿ ಸಂಸ್ಥೆಯು ಮೇರಿ ಸ್ಯಾಲಿಯನ್ ಸೊಸೈಟಿ ಆಫ್ ಮೇರಿ ಇಮ್ಯಾಕ್ಯುಲೇಟ್ (ರಿ) ಕೇಂದ್ರ ಕಚೇರಿ ಬೆಂಗಳೂರು ರವರು ನಡೆಸುತ್ತಿರುವ ಶಾಲೆ ಮತ್ತು ಅನಾಥಾಶ್ರಮವಾಗಿರುತ್ತದೆ.

೬. ೧ ನೇ ರೆಸ್ಪಾಂಡೆಂಟರು ಅನಾಥ ಮಗುವಾಗಿದ್ದಾಗ ೨ ನೇ ರೆಸ್ಪಾಂಡೆಂಟರಿಗೆ ಸಿಕ್ಕಿ ಮಾನವೀಯತೆ ದೃಷ್ಟಿಯಲ್ಲಿ ತಾಯಿ ಸ್ಥಾನವನ್ನು ನೀಡಿರುತ್ತಾರೆ. ಏಕೆಂದರೆ ಸ್ವತಃ ಎರಡನೇ ರೆಸ್ಪಾಂಡೆಂಟರು ಅನಾಥವಾಗಿ ಕ್ಯಾತೋಲಿಕ್ ಸಿಸ್ಟರ್ ಗಳ ಆರೈಕೆಯಲ್ಲಿ ಮೇಲ್ಕಂಡ ಸಂಸ್ಥೆಯಲ್ಲಿ ಬೆಳೆದು ಅನಾಥರಿಗೆ ಇರುವ ನೋವನ್ನು ಅರಿತವರಾದ್ದರಿಂದ ೧ ನೇ ರೆಸ್ಪಾಂಡೆಂಟರನ್ನು ಸಾಕಿ ಬೆಳಸಿರುತ್ತಾರೆ.

೭. ೨ನೇ ರೆಸ್ಪಾಂಡೆಂಟರಿಗೆ ಒಬ್ಬಳೇ ಸ್ವಂತ ಮಗಳಿದ್ದು ಆಕೆಯನ್ನು ಚೆನ್ನರಾಯಪಟ್ಟಣಕ್ಕೆ ಕೊಟ್ಟಿರುತ್ತದೆ. ೧ನೇ ರೆಸ್ಪಾಂಡೆಂಟರು ೨ನೇ ರೆಸ್ಪಾಂಡೆಂಟರಿಗೆ ಸಂಬಂದದಲ್ಲಿ ಸಾಕು ಮಗನೇ ಹೊರತು ಸ್ವಂತ ಮಗನೂ ಅಲ್ಲ, ದತ್ತು ಮಗನೂ ಅಲ್ಲ.

೮. ೨ ನೇ ರೆಸ್ಪಾಂಡೆಂಟರು ಸದರಿ ತಿಪಟೂರಿನ ಕ್ಯಾಥೋಲಿಕ್ ಸಿಸ್ಟರ್ ಗಳ ಮೇರಿ ಸ್ಯಾಲಿಯನ್ ಸೊಸೈಟಿ ಆಫ್ ಮೇರಿ ಇಮ್ಯಾಕ್ಯುಲೇಟ್ (ರಿ) ರವರ ಸ್ಟೆಲ್ಲಾ ಮೇರೀಸ್ ಶಾಲೆಯ ಆವರಣದಲ್ಲಿ ಇರುವ ಅನಾಥಾಶ್ರಮದಲ್ಲಿ ನಿಸ್ವಾರ್ಥ ಸೇವೆಯನ್ನು ಮಾಡುತ್ತ ಅಲ್ಲಿನ ಅಕ್ಕಿ ಕ್ಲೀನಿಂಗ್ ಕೆಲಸವನ್ನು ಮಾತ್ರ ಮಾಡುತ್ತ, ತಾಯಿಯರಾದ ಸಿಸ್ಟರ್ ರವರುಗಳು ನೀಡುವ ರೂ ೫೦ ಕೂಲಿ (ಒಂದು ಮೂಟೆ ಅಕ್ಕಿ ಕ್ಲೀನಿಂಗ್ ಸಂಬಾವನೆ) ಕೆಲಸಕ್ಕೆ ಹೋಗಿ

ಬರುವುದನ್ನು ತಪ್ಪಾಗಿ ಅರ್ಥೈಸಿರುವ ಅರ್ಜಿದಾರರು ೩ ಮತ್ತು ೪ ನೇ ರೆಸ್ಪಾಂಡೆಂಟರವರದ್ದೇ ಸಂಸ್ಥೆಯೆಂದು ಪ್ರತಿಬಿಂಬಿಸಿ ಅವರನ್ನೂ ಪಾರ್ಟಿಗಳನ್ನಾಗಿ ಮಾಡಿ ನಮಗೆ ದಾರಿ ದೀಪವಾದ ಸಂಸ್ಥೆಯಲ್ಲಿ ಸೇವೆಯಲ್ಲಿ ಇರುವವರ ಕಣ್ಣಲ್ಲಿ ನಮ್ಮನ್ನು ಕೆಳದರ್ಜೆಗೆ ಇಳಿಸಿರುತ್ತಾರೆ. ಇದು ಅರ್ಜಿದಾರರು ರೆಸ್ಪಾಂಡೆಂಟರ ಮೇಲೆ ನಡೆಸಿರುವ ಕಾನೂನು ವಿರೋಧ ದೌರ್ಜನ್ಯವಾಗಿರುತ್ತದೆ.

೯. ೧ ನೇ ರೆಸ್ಪಾಂಡೆಂಟರು ತಿಪಟೂರಿನ ಸ್ಟೆಲ್ಲಾ ಮೇರೀಸ್ ಶಾಲೆಯಲ್ಲಿ ಬಸ್ ಕ್ಲೀನರ್ ಆಗಿ ಈಗ್ಗೆ ಮೂರು ತಿಂಗಳಿಂದ ಶಾಲೆಯ ಬಳಿ ಅರ್ದ ಗಂಟೆ ಮಾತ್ರ ಹೋಗುತ್ತಿರುತ್ತಾರೆ. ದಿನವೊಂದಕ್ಕೆ ಸದರಿ ಕ್ಲೀನಿಂಗ್ ಕೆಲಸ ಮಾತ್ರ ಮಾಡುತ್ತಾರೆ ಮತ್ತು ಬೇರೆ ಸಣ್ಣ ಪುಟ್ಟ ಹೊರಗಿನ ಕೂಲಿ ಕೆಲಸದಿಂದ ರೂ ೫೦ ರಿಂದ ೧೦೦ ರವರೆಗೆ ನಿರ್ದಿಷ್ಟತೆ ಇಲ್ಲದೆ ಸಂಪಾದಿಸುವ ಕೂಲಿ ಕೆಲಸದವನಾಗಿರುತ್ತಾನೆ. ಈ ವಿಚಾರಗಳನ್ನು ಅರ್ಜಿದಾರರು ತಿಳಿದಿದ್ದರೂ ನ್ಯಾಯಾಲಯದ ಮುಂದು ಮರೆಮಾಚಿರುತ್ತಾರೆ, ಮತ್ತು ಸುಳ್ಳು ಹೇಳಿರುತ್ತಾರೆ.

೧೦. **ಅರ್ಜಿಯ ೩ ನೇ ಪ್ರಸ್ತಾವನೆಯಲ್ಲಿನ ವಿಚಾರದಲ್ಲಿ ಈ ರೆಸ್ಪಾಂಡೆಂಟರ ತಕರಾರು ಹೀಗಿರುತ್ತದೆ.** ದಿನಾಂಕ ೦೪-೧೦-೨೦೦೯ ರಲ್ಲಿ ಕ್ರಿಶ್ಚಿಯನ್ ಧರ್ಮ ಪದ್ದತಿಯಂತೆ ಅರ್ಜಿದಾರರ ಮತ್ತು ೧ ನೇ ರೆಸ್ಪಾಂಡೆಂಟರ ನಡುವೆ ತಿಪಟೂರಿನಲ್ಲಿ ಮದುವೆ ನಡೆಯಿತು ಎಂಬುದು ನಿಜವಾಗಿರುತ್ತದೆ. ಮದುವೆಯಾದ ನಂತರ ೬ ತಿಂಗಳು ಚೆನ್ನಾಗಿ ನೋಡಿಕೊಂಡರು ಎಂಬ ವಿಚಾರ ಅಸ್ಪಷ್ಟತೆಯಿಂದ ಮತ್ತು ಅರ್ದಂಬರ್ದ ಸುಳ್ಳಿನಿಂದ ಕೂಡಿರುತ್ತದೆ. ಅರ್ಜಿದಾರರು ಮದುವೆಯಾದ ನಂತರ ೨ನೇ ರೆಸ್ಪಾಂಡೆಂಟರ ಮನೆಗೆ ಬಂದು ಸುಮಾರು ೨೫ ದಿನಗಳು ಇದ್ದು - ಅನೇಕ ಮಾನಸಿಕ ಹಿಂಸೆ ಮತ್ತು ಅಸಹಿಷ್ಣುತೆ ವಾತಾವರಣವನ್ನು ನಿರ್ಮಿಸಿ, ೨ನೇ ರೆಸ್ಪಾಂಡೆಂಟರ ಸಣ್ಣ ಮನೆಯನ್ನು ನೋಡಿ ಅಲ್ಲಿರುವುದಿಲ್ಲ **"ನಾನು ಜಮೀನುದಾರಳು, ನನ್ನ ತಾಯಿ ಮನೆಯಲ್ಲಿ ಹೀಗೆ ಇರಲಿಲ್ಲ, ಅಲ್ಲೇ ಇರುತ್ತೇನೆ ಬರುವುದಾದರೆ ಅಲ್ಲಿಗೆ ಬಂದು ಬಿಡು ಎಂದು ೧ ನೇ ರೆಸ್ಪಾಂಡೆಂಟರಿಗೆ ಕರೆದಿರುತ್ತಾರೆ, ನನಗೆ ಇಲ್ಲಿ ವಾಸ ಮಾಡಲು ಇಷ್ಟವಿಲ್ಲ, ನನ್ನ ತಂದೆ ಕುಡುಕ ಆಸ್ತಿಯನ್ನು ನನ್ನ ಅಕ್ಕನಿಗೆ ಕೊಡುತ್ತಾನೆ, ಮಾರಿಬಿಡುತ್ತಾನೆ, ನಿನ್ನನ್ನು ನೆಚ್ಚಿ ಕುಳಿತರೆ ನನಗೆ ಏನೂ ಸಿಗೊಲ್ಲ, ಅಂತ ಹೇಳಿ, ಈ ರೆಸ್ಪಾಂಡೆಂಟರೊಂದಿಗೆ ಅನುಚಿತ ವರ್ತನೆ ತೋರಿ ಇಲ್ಲ ಸಲ್ಲದ ಜಗಳವನ್ನು ೨೫ ದಿನದಲ್ಲಿ ಮಾಡಿ ಹೋದವರು, ಈಗ ಸುಳ್ಳು ವಿಚಾರವನ್ನು ಹೇಳಿ ನ್ಯಾಯಾಲಯಕ್ಕೆ ಕೇಸು ಹಾಕಿರುತ್ತಾರೆ."** - ಬಡತನದಿಂದ ಬಂದಿದ್ದರೂ ಬಡತನಕ್ಕೆ ಸ್ಪಂದಿಸದೆ ೧ ಮತ್ತು ೨ ನೇ ರೆಸ್ಪಾಂಡೆಂಟರನ್ನು ತೊರೆದು ಹೋಗಿರುತ್ತಾರೆ. ಇದ್ದ ೨೫

ದಿನಗಳಲ್ಲಿ ಈ ರೆಸ್ಪಾಂಡೆಂಟರು ಚೆನ್ನಾಗಿ ನೋಡಿಕೊಂಡಿರುತ್ತೇವೆ. ಆರು ತಿಂಗಳು ನಮ್ಮ ಜೊತೆ ಇದ್ದರು ಎಂಬುದು ಸುಳ್ಳಾಗಿರುತ್ತದೆ.

೧೧. **ಅರ್ಜಿಯ ೪ ನೇ ಪ್ರಸ್ತಾವನೆಯಲ್ಲಿನ ವಿಚಾರದಲ್ಲಿ ಈ ರೆಸ್ಪಾಂಡೆಂಟರ ತಕರಾರು ಹೀಗಿರುತ್ತದೆ.** ಈ ರೆಸ್ಪಾಂಡೆಂಟರು ಅರ್ಜಿದಾರರಲ್ಲಿ ಯಾಗಲೀ ಅವರ ತವರು ಮನೆಯವರಲ್ಲಿ ಆಗಲೀ ಅಥವ ಬೇರೆ ಇನ್ನಾರ ಬಳಿಯಾಗಲೀ ವರಧಕ್ಷಿಣೆ ಕೇಳಿರುವುದಿಲ್ಲ, ಪಡೆದಿರುವುದಿಲ್ಲ, ಯಾರೂ ಈ ರೆಸ್ಪಾಂಡೆಂಟರಿಗೆ ವರಧಕ್ಷಿಣೆ ಕೊಟ್ಟಿರುವುದಿಲ್ಲ. ಅರ್ಜಿದಾರರು ಯಾವಪದ್ದತಿ ರೀತ್ಯವೂ ಏನನ್ನೂ ಕೊಟ್ಟಿರುವುದಿಲ್ಲ. ಮದುವೆ ಖರ್ಚನ್ನೂ, ಮದುವೆಗೆ ಬೇಕಾದ ಎಲ್ಲಾ ವಡವೆ, ವಸ್ತ್ರ, ಎಲ್ಲವನ್ನೂ ಕೂಡ ೧ ನೇ ರೆಸ್ಪಾಂಡೆಂಟರು ಇಟ್ಟುಕೊಂಡು ಮದುವೆ ಮಾಡಿಕೊಂಡಿರುತ್ತಾರೆ. ಅರ್ಜಿದಾರರ ತಂದೆಯು ಕುಡಿತದ ಚಟದವರಾಗಿರುವುದು, ಅವರ ಮನೆಯಲ್ಲಿ ಈಕೆ ಮತ್ತು ಈಕೆಯ ಅಕ್ಕ ಬಿಟ್ಟರೆ ಬೇರೆ ಯಾರೂ ವಾರಸ್ಸುದಾರರು ಇಲ್ಲ, ಎಂಬುವುದು ವಾಸ್ತವವಾಗಿರುತ್ತದೆ. ಅರ್ಜಿದಾರರಿಗೆ ಈ ೧ನೇ ರೆಸ್ಪಾಂಡೆಂಟರೂ ಕೂಡ ಆಕೆಯ ಜೊತೆ ಬಂದು ತಂದೆಯ ಮನೆಯಲ್ಲಿ ವಾಸ ಮಾಡಿಕೊಂಡು ಇರುವ ವ್ಯವಸಾಯ ಜಮೀನನ್ನು ಮಾಡಿಕೊಂಡು ಇರಲಿ ಅಥವ ಮದುವೆಗೆ ಸಾಲ ಮಾಡಿದಂತೆ ಮತ್ತೆ ಸಾಲ ಮಾಡಿ ಹಣ ತಂದು ಕೊಡಲಿ ಎಂಬ ದುರುದ್ದೇಶದಿಂದ ಈ ಕೇಸನ್ನು ಹಾಕಿರುತ್ತಾರೆ.

೧೨. ಅರ್ಜಿದಾರರು ತಮ್ಮ ಅರ್ಜಿಯ ೪ನೇ ಪ್ರಸ್ತಾವನೆಯಲ್ಲಿ ಹೇಳಿರುವಂತೆ ಹಣ ಮತ್ತು ವಡವೆ ವರಧಕ್ಷಿಣೆ ಯನ್ನು ಮಾರಿಕೊಂಡಿಲ್ಲ. ಅರ್ಜಿದಾರರು ನಾವು ಹಣ ಮಾರಿಕೊಂಡಿದ್ದೇವೆ ಎಂದು ಹೇಳಿರುವುದರಲ್ಲೇ, ತಿಳಿಯುತ್ತದೆ ಅವರ ಸುಳ್ಳುತನ. ವರಧಕ್ಷಿಣೆಯನ್ನೇ ನೀಡಿಲ್ಲ, ಅದರ ಪ್ರಸ್ತಾವನೆಯೇ ಇಲ್ಲವೆಂದು ನಮ್ಮ ತಕರಾರಿರುವಾಗ್ಗೆ, ಇಲ್ಲದ್ದನ್ನು ಮಾರಿಕೊಳ್ಳುವ ಆರೋಪ ಸುಳ್ಳಾಗಿರುತ್ತದೆ.

೧೩. ೧ನೇ ರೆಸ್ಪಾಂಡೆಂಟರಿಗೆ ಯಾವುದೇ ದುಶ್ಚಟವಿರುವುದಿಲ್ಲ. ವರಧಕ್ಷಿಣೆ ತರುವಂತೆ ಅರ್ಜಿದಾರರಿಗೆ ಈ ರೆಸ್ಪಾಂಡೆಂಟರು ಯಾವುದೇ ರೀತಿಯ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ನೀಡಿರುವುದಿಲ್ಲ, ಆರೋಪಿಸಿರುವಂತೆ ಯಾರ ಕುಮ್ಮಕ್ಕಿಗೂ ಒಳಗಾಗಿಲ್ಲ. ಆರೋಪಗಳು ಸುಳ್ಳಿನಿಂದ ಕೂಡಿರುತ್ತವೆ. ಕೈಗೆ ಸಿಕ್ಕ ವಸ್ತುಗಳಿಂದ ಹೊಡೆದು ಬಾಯಿಗೆ ಬಂದಂತೆ ಬೈಯ್ದು ಅವಾಚ್ಯ ಶಬ್ದಗಳಿಂದ ನಿಂದಿಸಿ ಹೀನಾಯವಾಗಿ ಕಾಣುತ್ತಿದ್ದರು ಎಂಬ ಆರೋಪವು ಸುಳ್ಳಾಗಿರುತ್ತದೆ.

೧೪. ಅರ್ಜಿದಾರರು ಏಕೆ ಪೋಲೀಸರಿಗೆ ದೂರು, ಫಿರ್ಯಾದು, ವಗೈರೆಗಳನ್ನು ನೀಡಿಲ್ಲ ಎಂಬ ಸಮಜಾಯಿಷಿಯು ಸುಳ್ಳಿನಿಂದ ಕೂಡಿರುತ್ತದೆ, ಹಾಗೂ ಅಸ್ವಾಭೀಕತೆಯಿಂದ

ಕೂಡಿರುತ್ತದೆ. ಅರ್ಜಿದಾರರು ಹಿಂಸೆಯನ್ನು ಸಹಿಸಿಕೊಂಡರು ಎಂಬ ಆರೋಪವು ಸುಳ್ಳಿನಿಂದ ಕೂಡಿರುತ್ತದೆ. ಈ ರೆಸ್ಪಾಂಡೆಂಟರು ಅರ್ಜಿದಾರರಿಗೆ ಯಾವ ರೀತಿಯಲ್ಲಿಯೂ, ಕಿರುಕುಳ ಮತ್ತು ಹಿಂಸೆಯನ್ನು ನೀಡಿರುವುದಿಲ್ಲ.

೧೫. ***ಅರ್ಜಿಯ ೫ ನೇ ಪ್ರಸ್ತಾವನೆಯಲ್ಲಿನ ವಿಚಾರದಲ್ಲಿ ಈ ರೆಸ್ಪಾಂಡೆಂಟರ ತಕರಾರು ಹೀಗಿರುತ್ತದೆ.*** ಅರ್ಜಿದಾರರ ತವರು ಮನೆಯವರು ತುಂಬಾ ಬಡವರಾಗಿದ್ದರಿಂದ, ಅವರಿಗೆ ವರದಕ್ಷಿಣೆ ಕೊಡಲು ಸಾಧ್ಯವಾಗಲಿಲ್ಲ ಎಂಬ ಹೇಳಿಕೆಯು ಸುಳ್ಳಿನಿಂದ ಕೂಡಿರುತ್ತದೆ. ವರಧಕ್ಷಿಣೆ ತರಲಿಲ್ಲ ಎಂಬ ಕಾರಣಕ್ಕೆ ಈ ರೆಸ್ಪಾಂಡೆಂಟರು ಕಿರುಕುಳ ನೀಡಿದರು/ ಹೆಚ್ಚಿಗೆ ಮಾಡಿದರು ಎಂದು ಹೇಳುವುದು ಸುಳ್ಳಿನ ಸರಮಾಲೆಯಾಗಿರುತ್ತದೆ. ಅಂತಹ ಇಲ್ಲದ ಕಿರುಕುಳಕ್ಕೆ ಅಥವ ಆರೋಪಿತ ಕಿರುಕುಳಕ್ಕೆ ಯಾರ ಕುಮ್ಮಕ್ಕೂ ಇರುವುದಿಲ್ಲ. ಅರ್ಜಿದಾರರು ಕೇಳಿಕೊಂಡರೂ ಕಿರುಕುಳ ನಿಲ್ಲಿಸಲಿಲ್ಲ ಎಂಬುದು ಸುಳ್ಳು ಆಗಿರುತ್ತದೆ. ಕಿರುಕುಳ ಅಥವ ದೌರ್ಜನ್ಯವನ್ನೇ ಮಾಡಿರುವುದಿಲ್ಲವಾದ್ದರಿಂದ ಅರ್ಜಿದಾರರು ಸುಳ್ಳಿನ ಆರೋಪವನ್ನು ಮಾಡಿರುತ್ತಾರೆ. ಈ ರೆಸ್ಪಾಂಡೆಂಟರು ಯಾರ ಮಾತನ್ನು ಕೇಳಿ ಜೀವನ ನಡೆಸುತ್ತಿಲ್ಲ ಅರ್ಜಿದಾರರ ಆರೋಪವು ನಿರಾದಾರವು ಮತ್ತು ಅಲ್ಪಸ್ವಲ್ಪ ಸಂಪಾದನೆ ಮಾರ್ಗಕ್ಕೆ ಯಾ ಗಂಜಿ ತಟ್ಟೆಗೆ ಕಲ್ಲು ಹಾಕುವ ಪ್ರಯತ್ನವನ್ನು ಅರ್ಜಿದಾರರು ಮಾಡುತ್ತಿದ್ದಾರೆ.

೧೬. ಅರ್ಜಿದಾರರು ಬೇಕೆಂದೇ ಎಲ್ಲಾ ಅಂಶಗಳನ್ನು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಅರ್ಜಿಯಲ್ಲಿ ಬರೆಸಿರುತ್ತಾರೆ. ಅರ್ಜಿಯಲ್ಲಿ ಕಿರುಕುಳದ ತಾರೀಖು ಇಲ್ಲ, ಮನೆಯಿಂದ ಹೊರಹಾಕಿದ ತಾರೀಖು ಇಲ್ಲ, ಮಧ್ಯಸ್ಥಿಗೆ ಮಾಡಿದವರ ಹೆಸರು ಇಲ್ಲ, ಅರ್ಜಿಯ ಐದನೇ ಕಾಲಂ ನಲ್ಲಿ ೪ ನೇಯವರನ್ನು ಗಂಡ ಅಂತ ಕರೆಯುತ್ತಾರೆ, ೧ ರಿಂದ ೩ ರವರು ತನ್ನ ಗಂಡ ೪ ನೇ ಅವರನ್ನು ಬೇಟಿಯಾಗಲು ಬಿಟ್ಟಿರುವುದಿಲ್ಲ ಎನ್ನುತ್ತಾರೆ. ಅರ್ಜಿದಾರರು ಕನ್ನಡದಲ್ಲಿಯೇ ಅರ್ಜಿಯನ್ನು ಹಾಕಿಸಿದ್ದರೂ ಕೂಡ ತಮ್ಮ ಅರ್ಜಿಯಲ್ಲಿ ಅರ್ಜಿಯನ್ನು ಕಾಟಾಚಾರಕ್ಕೆ ಹಾಕಿಸಿರುವ ಹಾಗೆ ತಮ್ಮ ವರ್ತನೆಯನ್ನು ತೋರಿರುತ್ತಾರೆ. ಅರ್ಜಿಯನ್ನು ಹಾಕುವ ಮೊದಲು ನುರಿತ ವಕೀಲರ ಸಹಾಯ ಪಡೆದು ಹಾಕಿಸಿರುತ್ತಾರೆ ಆದರೂ, ಈ ರೀತಿಯಾದ ಪದ ಬಳಕೆ ಮಾಡಿ ಎದುರುದಾರರನ್ನು ಗೊಂದಲಕ್ಕೆ ಸಿಲುಕಿಸುವ ಮತ್ತು ಮಧ್ಯಂತರ ಆದೇಶ ಪಡೆದು ತಿದ್ದುಪಡಿ ಅರ್ಜಿಗಳಲ್ಲೇ ಕಾಲ ಸವೆಸುವ ಹುನ್ನಾರವನ್ನು ಹೊಂದಿರುತ್ತಾರೆ.

೧೭. ೩ ಮತ್ತು ೪ ನೇ ರೆಸ್ಪಾಂಡೆಂಟರು ಈ ಕೇಸಿನಲ್ಲಿ ಅವಶ್ಯವಲ್ಲದ ಪಾರ್ಟಿಗಳಾಗಿದ್ದರೂ ಕೂಡ ಈ ರೆಸ್ಪಾಂಡೆಂಟರ ಗಂಜಿ ತಟ್ಟೆಗೆ ಕಲ್ಲು ಸುರಿಯಲು ಅವರಿಗೆ

ಕಿರುಕುಳನೀಡಲು ಮನೆಯ ಮಾನವನ್ನು ಬೀದಿ ರಂಪ ಮಾಡಿ ನಮ್ಮ ಬದುಕು ದುಸ್ತರವನ್ನಾಗಿಸಲು ಮಾಡಿರುವ ಪ್ರಯತ್ನವಾಗಿದೆ. ನಮಗೆ ಉಳಿಮೆಗೆ ಭೂಮಿಯಿಲ್ಲ, ಕಂಡವರ ಮನೆಯ ಕಸವನ್ನು ಎತ್ತಿ ಕೂಲಿ ಮಾಡಿದರೆ ನಮ್ಮ ಜೀವನ, ಇಂತಹ ಪರಿಸ್ಥಿತಿಯಲ್ಲಿ ಈ ಕೇಸುಹಾಕಿರುವುದು ನಮ್ಮ ಮನಸ್ಸಿಗೆ ಮತ್ತು ಹೃದಯಕ್ಕೆ ನೋವನ್ನು ತಂದಿದೆ.

೧೮. ಈ ರೆಸ್ಪಾಂಡೆಂಟರ ಮೇಲೆ ಮತ್ತು ನಮ್ಮ ದೇವ ದೂತರ ಹಾಗೆ ಬಡವರ ಸೇವೆಯಲ್ಲಿ ಇರುವ ೩ ಮತ್ತು ೪ ನೇ ರೆಸ್ಪಾಂಡೆಂಟರ ಮೇಲೆ "ಚಾಕು ಚೂರಿ ತೋರಿಸಿ ನಮ್ಮ ಕಕ್ಷಿದಾರರು ಮತ್ತು ಅವರ ತಂದೆಯವರನ್ನು ಬೆದರಿಸಿರುವೆವು" ಎಂಬ ಅರ್ಜಿದಾರರ ವಕೀಲರ ಆರೋಪವು ಅರ್ಜಿಯಲ್ಲಿ ಬಂದಿರುವುದು ಅರ್ಜಿದಾರರ ಮತ್ತು ಅವರ ವಕೀಲರ ಪಾತ್ರವನ್ನು ತೋರಿಸುತ್ತದೆ. ಅರ್ಜಿದಾರರ ವಕೀಲರು ಅರ್ಜಿಯಲ್ಲಿ ಹೇಳಿಕೆ ನೀಡಿರುವುದರಿಂದ, ಈ ಅರ್ಜಿಯಲ್ಲಿ ವಕೀಲರಾಗಿ ಮುಂದುವರಿಯುವುದು ವಕೀಲರ ಕಾಯ್ದೆ ಪ್ರಕಾರ ಕಾನೂನು ಭಾಹಿರವಾಗಿರುತ್ತದೆ. ಆ ರೀತಿಯ ಚಾಕು ಚೂರಿ ತೋರಿಸಿ ಬೆದರಿಸುವ ಸನ್ನಿವೇಶವೇ ನಡೆದಿರುವುದಿಲ್ಲ ಕೇವಲ ಕಾಲ್ಪನಿಕ ಕಥೆಯಾಗಿರುತ್ತದೆ.

೧೯. ಅರ್ಜಿದಾರರು ಮತ್ತು ಅವರ ತಂದೆಯಿಂದ ಕಾಲಿ ಸ್ಟಾಂಪ್ ಪೇಪರಿನಲ್ಲಿ ಸಹಿ ಪಡೆದುಕೊಂಡು ಮತ್ತೆ ತವರು ಮನೆಗೆ ೧ ಲಕ್ಷ ವರಧಕ್ಷಿಣೆ ತರುವವರೆಗೆ ಬರ ಬೇಡ ಎಂದು ಮನೆಯಿಂದ ಹೊರದೂಡಿರುತ್ತಾರೆ. ಎಂಬ ಆರೋಪದಲ್ಲಿ ಅರ್ಥವೇ ಕಾಣದಾಗಿದೆ. ತವರು ಮನೆಗೆ ೧ ಲಕ್ಷ ವರಧಕ್ಷಿಣೆ ತರುವವರೆಗೆ ಬರಬೇಡ ಎಂಬ ಆರೋಪಕ್ಕೆ ನಾವು ಹೇಗೆ ಉತ್ತರಿಸುವುದು?. ಆದರೆ ಸದರಿ ವಾಕ್ಯದಲ್ಲಿ ಅಡಗಿರುವ ದ್ವಂದ್ವಾರ್ಥದಲ್ಲಿ ನಾವು ಅರ್ಜಿದಾರಾರಿಗೆ ೧ ಲಕ್ಷ ವರಧಕ್ಷಿಣೆ ತರುವಂತೆ ಬೇಡಿಕೆ ಇಟ್ಟಿಲ್ಲ. ಆಕೆಯನ್ನು ನಾವು ಮನೆಯಿಂದ ಹೊರಕ್ಕೆ ಕೂಡ ಹಾಕಿರುವುದಿಲ್ಲ. ಆಕೆ ಮನೆಯಿಂದ ಮದುವೆ ಆದ ಸುಮಾರು ೨೫ ದಿನಗಳ ನಂತರ ಬಾಳಲಾಗದೆ ತವರಿನ ಸಿರಿವಂತಿಕೆಗೆ ಮತ್ತು ಜಮೀನಿನ ಆಸೆಗೆ ಅಲ್ಲಿಗೆ ಹೋದಳೇ ಹೊರತು ಆಕೆ ಅರ್ಥವಿಲ್ಲದ ಪದಗಳಲ್ಲಿ ಮಾಡುತ್ತಿರುವ ಆರೋಪವು ಸುಳ್ಳಿನಿಂದ ಕೂಡಿರುತ್ತದೆ.

೨೦. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಆರು ತಿಂಗಳು ರೆಸ್ಪಾಂಡೆಂಟರ ಮನೆಯಲ್ಲಿ ಸುಖವಾಗಿ ಇದ್ದರು ಎಂದು ಹೇಳುವ ಮಾತು ಸತ್ಯವಿರುವುದಿಲ್ಲ, ನಂತರ ಕಿರುಕುಳ ಪ್ರಾರಂಬವಾಯಿತು ಎಂಬ ಮಾತು ನಿಜವಲ್ಲ. ನಂತರ ಸಂಬಂಧಿಕರು ಮತ್ತು ಹಿತೈಷಿಗಳು ಮಧ್ಯಸ್ಥಿಕೆ ಮಾಡಿದರು ಎಂಬುದು ನಿಜವಲ್ಲ. ಚಾಕು ಚೂರಿ ತೋರಿಸಿ ಸಹಿ ಪಡೆದು ವರಧಕ್ಷಿಣೆಗಾಗಿ ಹೊರಹಾಕಿರುತ್ತಾರೆ ಎಂಬ ವಿಚಾರವೂ ಸುಳ್ಳಾಗಿರುತ್ತದೆ. ಅರ್ಜಿದಾರರು

ಎಲ್ಲಿಯೂ ಮದುವೆ ತಾರೀಖು ಬಿಟ್ಟರೆ ಬೇರೆ ಯಾವುದೇ ನಿಖರವಾದ ತಾರೀಖು ತೋರಿರುವುದಿಲ್ಲ, ಇವೆಲ್ಲಾ ಅವರ ಬಳಿಯಲ್ಲೇ ಅವರಿಂದ ಮಾಡಿಕೊಂಡಿರುವ ದಾಖಲಾತಿಗಳಿಗೆ ತದ್ವಿರುದ್ಧವಾದ ಆರೋಪಗಳಾಗಿರುತ್ತವೆ. ಮಾನ್ಯ ನ್ಯಾಯಾಲಯ ಅರ್ಜಿದಾರರಿಗೆ ಪೂರ್ಣ ಅಂಶವುಳ್ಳ ಆರೋಪವನ್ನು ಸಲ್ಲಿಸಲು ಆದೇಶಿಸುವಂತೆ ಕೋರುತ್ತೇವೆ.

೨೧. ಅರ್ಜಿದಾರರು ಬೇರೆ ದಾರಿ ಕಾಣದೆ ತವರು ಎಂ.ದಾಸಾಪುರಕ್ಕೆ ಬಂದರು ಎಂದು ಹೇಳುವುದು ಸುಳ್ಳಿನಿಂದ ಕೂಡಿರುತ್ತದೆ. ಅರ್ಜಿದಾರರು ಸ್ವಯಂ ತಮ್ಮ ಇಚ್ಛೆಯಿಂದಲೇ ಕಟ್ಟಿಕೊಂಡ ಗಂಡನನ್ನು ನೀನು ನನ್ನ ಪಾಲಿಗೆ ಸತ್ತಿರುವೆ ಅಂತ ಹೇಳಿ ಮತ್ತೆ ನನ್ನನ್ನು ನೋಡಲು ಬರಬೇಡ ಎಂದು ಹೇಳಿ ಬಂದಿರುತ್ತಾರೆ. ಯಾವುದೇ ಪಂಚಾಯ್ತಿ ನಡೆದಿರುವುದಿಲ್ಲ ಮತ್ತು ವರಧಕ್ಷಿಣೆಗಾಗಿ ಮನೆಯಿಂದ ಹೊರಹಾಕಲಾಯಿತು ಎಂಬ ಆರೋಪವು ಸುಳ್ಳಿನಿಂದ ಕೂಡಿರುತ್ತದೆ.

೨೨. **ಅರ್ಜಿಯ ೬ ನೇ ಪ್ರಸ್ತಾವನೆಯಲ್ಲಿನ ವಿಚಾರದಲ್ಲಿ ಈ ರೆಸ್ಪಾಂಡೆಂಟರ ತಕರಾರು ಹೀಗಿರುತ್ತದೆ.** ೧ನೇ ರೆಸ್ಪಾಂಡೆಂಟರಿಗೆ ಮರುಮದುವೆ ಮಾಡಲು ಇತರೆ ರೆಸ್ಪಾಂಡೆಂಟರು ಪ್ರಯತ್ನ ಮಾಡುತ್ತಿದ್ದಾರೆ, ಎಂಬ ಆರೋಪವು ಸುಳ್ಳಿನಿಂದ ಕೂಡಿರುತ್ತದೆ. ಅರ್ಜಿದಾರರ ಯೋಗ ಕ್ಷೇಮವನ್ನು ನೋಡಿಕೊಳ್ಳುವುದು ಈ ರೆಸ್ಪಾಂಡೆಂಟರ ಆಧ್ಯ ಕರ್ತವ್ಯವಾಗಿರುತ್ತದೆ ಎಂಬುದು ಸರಿಯಿರುತ್ತದೆ ಆದರೂ, ಗಂಡನನ್ನು ನನ್ನ ಪಾಲಿಗೆ ಸತ್ತೆ ಎಂದು ಹೊರ ಹೋಗಿರುವ ಕ್ರೂರ ಹೆಣ್ಣು ಮನೆಗೆ ಬಂದು ನಮ್ಮನ್ನು ಸಾಯಿಸಿ ಮನೆಯನ್ನು ಪಡೆದು ಹೋಗದೆ ಇರುವಳೆ ಎಂಬುದು ನಮ್ಮ ಬಯವಿರುವಾಗ್ಗೆಯೂ ಕೂಡ ಆಕೆ ನಮ್ಮ ಮನೆಯಲ್ಲಿ ನಮ್ಮ ಬಡತನವನ್ನು ಒಪ್ಪಿ ಬರುವುದಾದರೆ ನಾವು ಉಪವಾಸವಿದ್ದಾದರೂ ಆಕೆಯನ್ನು ಸಾಕುತ್ತೇವೆ. ಆದರೆ ಸುಳ್ಳು ಆರೋಪವನ್ನು ಮಾಡಿ ದೈವ ಸಂಭೂತರಾದ ೩ ಮತ್ತು ೪ ನೇ ರೆಸ್ಪಾಂಡೆಂಟರಿಗೆ ಆರೋಪವನ್ನು ಮಾಡಿ, ನಾಳೆ ಯಾವುದಾದರೂ ಅನಾಹುತ ಮಾಡಿಕೊಳ್ಳಲು ಪ್ರಯತ್ನಿಸಿ ನಮ್ಮ ಮೇಲೆ ಆರೋಪಮಾಡಿದರೆ ನಾವು ಎಲ್ಲಿ ಹೋಗುವುದು ಎಂಬುದೇ ಬಯದ ವಾತಾವರಣವಿರುತ್ತದೆ. ಅರ್ಜಿದಾರರು ಮದುವೆಯಾಗಿ ಇಲ್ಲಿವರೆಗೆ ಅನೈತಿಕತೆ ಬದುಕು ಸವೆಸುತ್ತ ತಮ್ಮ ಜಮೀನಿನ ವರಮಾನದಲ್ಲಿ ಸ್ವೇಚ್ಛೆಯಾಗಿ ಬದುಕುತ್ತಿದ್ದಾರೆ ಎಂಬ ಮಾತನ್ನು ಕೇಳಿಯೂ, ಅಂತಹ ಅನೈತಿಕತೆಯ ಹಿನ್ನೆಲೆಯನ್ನು ಮರೆತು ಜೀವಿಸಲು ಸಾಧ್ಯವೆ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಲು ಕೋರುತ್ತೇವೆ.

೨೩. ಅರ್ಜಿದಾರರಿಗೆ ಆಧಾಯವಿಲ್ಲ ಎಂದು ಹೇಳುವುದು ಸುಳ್ಳಿನಿಂದ ಕೂಡಿರುತ್ತದೆ. ಅರ್ಜಿದಾರರ ತಂದೆಗೆ ಇಬ್ಬರೇ ಹೆಣ್ಣು ಮಕ್ಕಳಿದ್ದು ಚನ್ನರಾಯಪಟ್ಟಣ ತಾಲೂಕು, ನುಗ್ಗೇಹಳ್ಳಿ ಹೋಬಳಿ ಎಂ.ದಾಸಾಪುರದಲ್ಲಿ ಸ್ವಂತ ಮನೆಯಿರುತ್ತದೆ. ಅರ್ಜಿದಾರರಿಗೆ ಖರ್ಚಿಗೆ ಹಣವು ಅವರ ಜಮೀನಿನ ಆಧಾಯದಲ್ಲಿಯೇ ಬರುತ್ತದೆ. ಈ ಕೆಳಕಂಡ ಎಂ.ದಾಸಾಪುರ ಜಮೀನು ಅರ್ಜಿದಾರರ ತಂದೆಯ ಹೆಸರಿನಲ್ಲಿ ಇರುತ್ತದೆ. ಅದು ಅವರ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ.

| ಸರ್ವೆ ನಂಬರ್ | ಖಾತಾ ನಂಬರ್ | ವಿಸ್ತೀರ್ಣ | ಖಾತೆದಾರರ ಹೆಸರು | ಬೆಳೆ ವಿವರ | ಸ್ವಾಧೀನತೆಯ ರೀತಿ |
|---|---|---|---|---|---|
| 1 | 283 | 0–02 | ಅರಳಪ್ಪ ಉ ಪುಟ್ಟ ಬಿನ್ ಜಾಗೇರಿ ರಾಜಪ್ಪ | ತಡಣಿ | 5/83–84 |
| 41/1ಎ | 233 | 0–20 | ಅರಳಪ್ಪ ಉ ಪುಟ್ಟ ಬಿನ್ ಜಾಗೇರಿ ರಾಜಪ್ಪ | ರಾಗಿ | 15/83–84 |
| 81/2 | 201 | 0–30 | ಅರಳಪ್ಪ ಉ ಪುಟ್ಟ ಬಿನ್ ಜಾಗೇರಿ ರಾಜಪ್ಪ | | 2/07–08 |
| 95/1 | 233 | 0–07 | ಅರಳಪ್ಪ ಉ ಪುಟ್ಟ ಬಿನ್ ಜಾಗೇರಿ ರಾಜಪ್ಪ | | 9/95–96 |
| 95/3 | 233 | 0–04–08 | ಅರಳಪ್ಪ ಉ ಪುಟ್ಟ ಬಿನ್ ಜಾಗೇರಿ ರಾಜಪ್ಪ | ರಾಗಿ ಹುರಳಿ | 15/83–84 |
| 96/1 | 233 | 0–04 | ಅರಳಪ್ಪ ಉ ಪುಟ್ಟ ಬಿನ್ ಜಾಗೇರಿ ರಾಜಪ್ಪ | ಜೋಳ | 17/82–83 |

೨೪. ಅರ್ಜಿದಾರರು ತಮ್ಮ ಮದುವೆ ಆದ ಮೇಲೂ ಗಂಡನ ಜೊತೆ ಬಾಳುವೆ ನಡೆಸುವುದಾಗಿ ಬಂದು ಗಂಡನ ಮನೆ ಬೇಡವೆಂದು ತಂದೆಯ ಮನೆಯನ್ನು ಮತ್ತು ಅವರಲ್ಲಿರುವ ಸಿರಿಯನ್ನು ಬಯಸಿ ಹೋಗಿರುವಾಗ, ಈ ರೆಸ್ಪಾಂಡೆಂಟರು ಅರ್ಜಿದಾರರಿಗೆ ವಸತಿ ಮಾಡಿಕೊಡುವ ಕರ್ತವ್ಯವುಳ್ಳವರಾಗಿರುವುದಿಲ್ಲ. ಅರ್ಜಿದಾರರು ಈ ರೆಸ್ಪಾಂಡೆಂಟರ ಮನೆಯ ಆಹಾರವನ್ನು ಮತ್ತು ಬಡತನದ ಪರಿಸ್ಥಿತಿಯನ್ನು ತಿರಸ್ಕರಿಸಿ ಹೋಗಿರುವಾಗ್ಗೆ ಅರ್ಜಿದಾರರಿಗೆ ಈ ರೆಸ್ಪಾಂಡೆಂಟರು ಪ್ರತ್ಯೇಕ ಊಟ ಮತ್ತು ವಸತಿ ನೀಡುವ ಕರ್ತವ್ಯವುಳ್ಳವರಾಗಿರುವುದಿಲ್ಲ. ಅರ್ಜಿದಾರರು ತಮಗೆ ರೆಸ್ಪಾಂಡೆಂಟರಿಂದ ಯಾವ ಖಾಯಿಲೆ ಬಂದಿದೆ ಎಂದು ನಿಖರವಾಗಿ ತಿಳಿಸದೆ/ ಆರೋಪಿಸದೆ ಇರುವುದರಿಂದ ಆಸ್ಪತ್ರೆ ಖರ್ಚು ನೀಡಲು ಕರ್ತವ್ಯವುಳ್ಳವರಾಗಿರುವುದಿಲ್ಲ. ಅರ್ಜಿದಾರರ ಇತರೆ ಅವಶ್ಯಕತೆಗಳಿಗೆ ಮತ್ತು ಅವರ ಸ್ವೇಚ್ಛೆಗಳಿಗೆ ಈ ರೆಸ್ಪಾಂಡೆಂಟರು ಹಣ ನೀಡಲು ಕರ್ತವ್ಯವುಳ್ಳವರಾಗಿರುವುದಿಲ್ಲ.

೨೫. ಮನುಜನಾದವನು ಇತರೆಯವರಲ್ಲಿ ಯಾವುದೇ ಹಕ್ಕು ಪ್ರತಿಪಾದಿಸುವ ಮುಂಚೆ ಇತರೆಯವರಿಗೂ ಹಕ್ಕು ಇದೆ ಎಂಬುದನ್ನು ಗೌರವಿಸಬೇಕು, ಅದನ್ನು ಅರ್ಜಿದಾರರು ಮಾಡಿರುವುದಿಲ್ಲ. ಅರ್ಜಿದಾರರು ಕೇವಲ ಕಾನೂನಿನ ಅಡಿಯಲ್ಲಿ ಹಕ್ಕನ್ನು ಕೇಳುತ್ತಿದ್ದಾರೆ ಹೊರತು ತಾವು ನಿರ್ವಹಿಸಬೇಕಾದ ಕರ್ತವ್ಯದ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲ,

ಕರ್ತವ್ಯವನ್ನು ಮರೆತು ಕೇವಲ ಹಕ್ಕನ್ನು ಕೇಳುವುದು ಸರಿಯಲ್ಲ. ಅರ್ಜಿದಾರರ ಬೇಡಿಕೆಯಾದ ರೂ ೬೦೦೦-೦೦ ನೀಡಲು ಈ ರೆಸ್ಪಾಂಡೆಂಟರಿಗೆ ಚೈತನ್ಯವೂ ಇರುವುದಿಲ್ಲ ಮತ್ತು ಯಾವುದೇ ರೀತಿಯ ಪೋಷಣಾ ವೆಚ್ಚವನ್ನು ನೀಡಲು ನಿರಾಕರಿಸುತ್ತೇವೆ.

೨೬. ಈಗಾಗಲೇ ಹೇಳಿದಂತೆ ಸ್ಟೆಲ್ಲಾ ಮೇರೀಸ್ ಶಾಲೆಯ ಆವರಣದಲ್ಲಿರುವ ಅನಾಥಾಲಯದಲ್ಲಿ ಎರಡನೇ ರೆಸ್ಪಾಂಡೆಂಟರು ಅಕ್ಕಿ ಆರಿಸುವುದು ಕೆಲಸ ನಿರ್ವಹಿಸುತ್ತಾರೆ, ಅದೇ ಸಂಸ್ಥೆಯಲ್ಲಿ ಅನಾಥಳಾಗಿ ಬೆಳೆದ ಎರಡನೇ ರೆಸ್ಪಾಂಡೆಂಟರು ಧರ್ಮಾರ್ಥ ಕೆಲಸವನ್ನು ಮಾಡುತ್ತಿದ್ದರೂ ಕೂಡ, ಸ್ಟೆಲ್ಲಾ ಮೇರೀಸ್ ಶಾಲೆಯ ನಿಸ್ವಾರ್ಥ ಸೇವೆಯ ಸಾಧ್ವಿನಿಯರು ಒಂದು ಮೂಟೆ ಅಕ್ಕಿ ಕ್ಲೀನಿಂಗ್ ಮಾಡಿದರೆ ರೂ ೫೦-೦೦ ನೀಡುತ್ತಾರೆ, ಅರ್ಜಿದಾರರು ಆರೋಪಿಸುವಂತೆ ಮಾಸಿಕ ಸಂಬಳವನ್ನು ಪಡೆಯುತ್ತಿಲ್ಲ. ೧ನೇ ರೆಸ್ಪಾಂಡೆಂಟರು ಬಸ್ ಕ್ಲೀನಿಂಗ ಕೆಲಸದ ನಿಮಿತ್ತ ಆಗಿಂದ್ದಾಗ್ಗೆ ಶಾಲೆಯ ಆವರಣಕ್ಕೆ ಹೋಗುತ್ತಾರಾದರೂ ಯಾವುದೇ ಖಾಯಂ ಅಥವ ತಾತ್ಕಾಲಿಕ ಕೆಲಸದಲ್ಲಿ ಇರುವುದಿಲ್ಲ. ಅರ್ಜಿದಾರರು ಆರೋಪಿಸಿರುವಂತೆ ೧ ಮತ್ತು ೨ ನೇ ರೆಸ್ಪಾಂಡೆಂಟರಿಗೆ ತಿಂಗಳಿಗೆ ರೂ ೧೫೦೦೦-೦೦ ಸಂಬಳ ಬರುತ್ತಿಲ್ಲ.

೨೭. ಈ ರೆಸ್ಪಾಂಡೆಂಟರಲ್ಲಿ ೧ ನೇ ರೆಸ್ಪಾಂಡೆಂಟರು ತಿಂಗಳಿಗೆ ಗರಿಷ್ಟ ರೂ ೧೦೦೦ ರಿಂದ ೧೫೦೦ ರೂ ದುಡಿಯುತ್ತಾರೆ. ಎರಡನೇ ರೆಸ್ಪಾಂಡೆಂಟರು ಗರಿಷ್ಟ ೩೦೦ ರಿಂದ ೫೦೦-೦೦ ರೂ ದುಡಿಯುತ್ತಾರೆ. ೧ ನೇ ರೆಸ್ಪಾಂಡೆಂಟರು ೨ ನೇ ರೆಸ್ಪಾಂಡೆಂಟರ ಮನೆಯಲ್ಲಿ ವಾಸವಿದ್ದು ಸದರಿ ಮನೆ ಎರಡನೇ ರೆಸ್ಪಾಂಡೆಂಟರ ಸ್ವಯಾರ್ಜಿತ ಸ್ವತ್ತಾಗಿರುತ್ತದೆ, ಹೀಗಾಗಿ ಈ ರೆಸ್ಪಾಂಡೆಂಟರಿಗೆ ಮನೆ ಬಾಡಿಗೆ ಖರ್ಚು ಇಲ್ಲ, ಬರುವ ಸುಮಾರು ಎರಡು ಸಾವಿರ ರೂ ಮಾಸಿಕ ಆಧಾಯ ದಲ್ಲಿ ೨ ನೇ ರೆಸ್ಪಾಂಡೆಂಟರಿಗೆ ಇರುವ ಕಾಯಿಲೆಗಳಿಗೆ ಮಾಸಿಕ ರೂ ೭೫೦-೦೦ ಬೇಕಾಗುತ್ತದೆ. ಅಹಾರ ಪದಾರ್ಥಗಳು, ಸಾಲ, ಸಾಲಕ್ಕೆ ಬಡ್ಡಿ, ಇವೆಲ್ಲಾ ಸೇರಿ ಉಳಿತಾಯವೇ ಇಲ್ಲದೆ ಜೀವನ ಸಾಲದಲ್ಲಿ ನಿರ್ವಹಿಸಲಾಗುತ್ತಿದೆ. ಅಸಲಿಗೆ ಕೆಲವು ಸಾರಿ ತೀವ್ರ ಸಂಕಷ್ಟವಾದಾಗ ಸ್ಟೆಲ್ಲಾ ಮೇರೀಸ್ ಅನಾಥಾಲಯದಿಂದ ಬಿಕ್ಷಾ ರೂಪದಲ್ಲಿ ರೇಷನ್ ಪಡೆದದ್ದೂ ಇದೆ. ಕೆಲವಾರು ಸಿಸ್ಟರ್ ಗಳ ಬಳಿ ಬಡ್ಡಿಯಿಲ್ಲದ ಸಾಲವನ್ನು ಮಾಡಿ ಅಸಲು ತೀರಿಸಲಾಗದೆ ಸಾಲ ಮನ್ನಾ ಮಾಡಿಸಿಕೊಂಡದ್ದೂ ಇದೆ, ಇವು ಯಾವುದಕ್ಕೂ ಲೆಕ್ಕವಿಟ್ಟಿಲ್ಲ, ಆದರೆ ಈ ರೆಸ್ಪಾಂಡೆಂಟರ ಹೃದಯದಲ್ಲಿ ಅನಾಥಾಲಯದ ಬಗ್ಗೆ ಚಿರಋಣಿತ್ವ ಇದೆ.

೨೮. ಈ ರೆಸ್ಪಾಂಡೆಂಟರಿಗೆ ನೋಟೀಸು ಬಂದಿತ್ತು ಆದರೂ ಅದಕ್ಕೆ ಉತ್ತರಿಸಲು ವಕೀಲರ ಬಳಿಗೆ ಹೋದಾಗ ಹೆಚ್ಚಿನ ಫೀಸನ್ನು ಕೇಳಿದರು ಎಂಬ ಕಾರಣಕ್ಕೆ ಹಣಕಾಸು

ಒದಗಿಸಿಕೊಳ್ಳುವುದರಲ್ಲಿ ವಿಳಂಬವಾಗಿದೆ. ನಂತರ ಮಾನ್ಯ ನ್ಯಾಯಾಲಯದಿಂದಲೇ ನೋಟೀಸು ಬರಲಾಗಿ ತಿಪಟೂರಿನ ಅಥವ ಸ್ಥಳೀಯ ವಕೀಲರನ್ನು ಹೆಚ್ಚಿನ ಫೀಸು ನೀಡಿ ನೇಮಿಸಿಕೊಳ್ಳಲಾಗದೆ ಕುಣಿಗಲ್ ನಲ್ಲಿರುವ ಈ ರೆಸ್ಪಾಂಡೆಂಟರ ಸ್ನೇಹಿತ ವಕೀಲರೋರ್ವರನ್ನು ಸಂಪರ್ಕಿಸಿ ಸದರಿ ನೋಟೀಸು ಮತ್ತು ಅರ್ಜಿಗೆ ಪೂರ್ಣವಾಗಿ ತಡವಾಗಿ ಈ ತಕರಾರಿನ ಮೂಲಕ ಉತ್ತರಿಸಿರುತ್ತೇವೆ. ತಡವಾದುದ್ದಕ್ಕೆ ಕ್ಷಮೆ ಕೋರುತ್ತೇವೆ.

೨೯. ಅರ್ಜಿದಾರರು ೧ನೇ ರೆಸ್ಪಾಂಡೆಂಟರೊಂದಿಗೆ ಸುಖ ಸಂತೋಷ ದಿಂದ ಜೀವನ ನಡೆಸಲು ಇಚ್ಛೆಉಳ್ಳವರಾಗಿರುತ್ತಾರೆ, ಇತರೆ ರೆಸ್ಪಾಂಡೆಂಟರು ಜೀವನ ನಡೆಸಲು ಬಿಡುತ್ತಿಲ್ಲ ಎಂಬ ಆರೋಪವು ಸುಳ್ಳಾಗಿರುತ್ತದೆ. ಸ್ವಯಂ ಅರ್ಜಿದಾರರೇ ೧ನೇ ರೆಸ್ಪಾಂಡೆಂಟರೊಂದಿಗೆ ತಿಪಟೂರಿನಲ್ಲಿ ಬಂದು ಬಡತನದ ವಾಸ್ತವಿಕತೆಗೆ ಹೊಂದಿಸಿಕೊಂಡು ಜೀವನ ನಡೆಸಲು ತಯಾರಿಲ್ಲ. ಅವರಿಗೆ ಕೇವಲ ಹಣ ಮಾತ್ರ ಬೇಕು, ಅವರ ಕರ್ತವ್ಯ ಬೇಕಿಲ್ಲ.

೩೦. ಅರ್ಜಿದಾರರ ಲಾಯರ್ ನೋಟೀಸು ಬಂದ ಮೇಲೆ ಈ ರೆಸ್ಪಾಂಡೆಂಟರು ಲಾಯರಿಂದ ಉತ್ತರಿಸಲು ಹಣವಿಲ್ಲದೆ, ಅರ್ಜಿದಾರರನ್ನು ಅವರ ಮನೆಯಲ್ಲಿ ಬೇಟಿಯಾಗಿ, "ಇವೆಲ್ಲಾ ಏಕೆ ಸುಮ್ಮನೆ ನನ್ನ ಜೊತೆ ಬಂದು ಸಂಸಾರ ಮಾಡು" ಎಂದು ಮತ್ತೆ ಕೇಳಿಕೊಂಡಾಗ, ಈ ೧ನೇ ರೆಸ್ಪಾಂಡೆಂಟರಿಗೆ ಬೈಗುಳದೊಂದಿಗೆ, **"ಮನೆ ಮಾರಿಯಾದರೂ ದುಡ್ಡುಕೊಟ್ಟು ಸೆಟಲ್ ಮಾಡಿಕೋ ಇಲ್ಲ ಅಂದ್ರೆ ಜೈಲಿಗೆ ಕಳಿಸೋದು ನನಗೆ ಗೊತ್ತು, ನಿನ್ನ ಆ ಮುಂಡೆ ತಾಯಿನ ಸ್ಟೆಲ್ಲಾ ಮೇರೀಸ್ ನಿಂದ ಹೊರ ಹಾಕಿಸುವುದು ಹೇಗೆ ಅಂತ ನನಗೆ ಗೊತ್ತು"** ಎಂದು ಹೆದರಿಸಿ ಕಳಿಸಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಈ ರೆಸ್ಪಾಂಡೆಂಟರು ಯಾವುದೇ ಕಾರಣಕ್ಕೆ ಅರ್ಜಿದಾರರಿಗೆ ಮಾನಸಿಕ, ದೈಹಿಕ, ಬಾವನಾತ್ಮಕ ಹಾಗೂ ಆರ್ಥಿಕ ದೌರ್ಜನ್ಯ ನೀಡಿರುವುದಿಲ್ಲ. ಬದಲಿಗೆ ಅರ್ಜಿದಾರರು ರೆಸ್ಪಾಂಡೆಂಟರ ಮೇಲೆ ಕಾನೂನು ಧುರ್ಬಳಕೆ ಮಾಡಿಕೊಂಡು ಧೌರ್ಜನ್ಯವೆಸಗಿರುವುದರಿಂದ ಯಾವುದೇ ಪರಿಹಾರ ಕೋರಲು ಅನರ್ಹರಾಗಿರುತ್ತಾರೆ.

೩೧. ಈಗ ಅರ್ಜಿದಾರರು ನಮ್ಮೊಡನೆ ವಾಸಿಸಲು ಬಂದರೂ ಈ ರೆಸ್ಪಾಂಡೆಂಟರನ್ನು ಜೈಲಿಗೆ ಕಳಿಸುವ ದುರಾಲೋಚನೆ ಉಳ್ಳವರಾದ್ದರಿಂದ ಯಾವುದೇ ಸಂದಾನಕ್ಕೂ, ಅನರ್ಹತೆಯನ್ನು ತೋರಿರುತ್ತಾರೆ. ೧ ಮತ್ತು ೨ ನೇ ರೆಸ್ಪಾಂಡೆಂಟರ ಬಳಿ ಹಣವಿಲ್ಲ ಆರ್ಥಿಕವಾಗಿ ಸಂಕಷ್ಟದಲ್ಲಿ ಇರುವವರು ಎಂದು ತಿಳಿದಿರುವ ಅರ್ಜಿದಾರರು, ೩ ಮತ್ತು ೪ ನೇ ರೆಸ್ಪಾಂಡೆಂಟರಿಗೆ ಕಿರುಕುಳ ನೀಡಿದರೆ, ಬರುವ ಗಂಜಿ ಮೂಲವೂ ದ್ವಂಸ

ಗೊಳಿಸಬಹುದು, ಮನೆಯನ್ನು ಮಾರಿಸಿ ಈ ರೆಸ್ಪಾಂಡೆಂಟರಿಗೆ ಕಿರುಕುಳ ನೀಡಿ ಆರ್ಥಿಕ ದೌರ್ಜನ್ಯವನ್ನು ಎಸಗಬಹುದು ಎಂದು ಈ ರೀತಿಯ ಸುಳ್ಳು ಅರ್ಜಿಯನ್ನು ಹಾಕಿರುತ್ತಾರೆ.

೩೨. ಈ ರೆಸ್ಪಾಂಡೆಂಟರಿಗೆ ವಾಸಿಸಲು ಸಣ್ಣ ಮನೆ ಬಿಟ್ಟರೆ, ಬೇರೆ ಯಾವುದೇ ಇತರೆ ವ್ಯವಸಾಯೇತರ ಜಮೀನಾಗಲೀ, ಸೈಟುಗಳಾಗಲೀ, ಮನೆಯಾಗಲೀ, ವ್ಯವಸಾಯ ಜಮೀನಾಗಲೀ ಇರುವುದಿಲ್ಲ. ಕೂಲಿ ಮಾಡಿ ಮೇಲೆ ಹೇಳಿದಂತೆ ಜೀವಿಸುವ ಹಂಗು ಬಿಟ್ಟರೆ ಬೇರೆ ಯಾವುದೇ ಸ್ಥಿರ ಮತ್ತು ಅಸ್ಥಿರ ವರಮಾನ ಇರುವುದಿಲ್ಲ.

೩೩. ಅರ್ಜಿದಾರರು ಹೇಳಿಕೊಂಡಿರುವ ಮತ್ತು ಆರೋಪಿಸಿರುವ ಈ ಕೆಳಕಂಡ ಅಂಶಗಳಿಂದ ಅರ್ಜಿದಾರರೇ ಎರಡನೇ ರೆಸ್ಪಾಂಡೆಂಟರ ಮೇಲೆ ಕೌಟುಂಬಿಕ ದೌರ್ಜನ್ಯವನ್ನು ಎಸಗಿರುತ್ತಾರೆ, ಅದಕ್ಕೆ ಅರ್ಜಿದಾರರೇ ಎರಡನೇ ರೆಸ್ಪಾಂಡೆಂಟರಿಗೆ ಪರಿಹಾರವನ್ನು ಕೊಡಬೇಕಿರುತ್ತದೆ. ಈ ಅಂಶಗಳನ್ನು ಪರಿಗಣಿಸಿ ಮಾನ್ಯ ನ್ಯಾಯಾಲಯ ಪರಿಹಾರವನ್ನು ನೀಡಲು ಆದೇಶಿಸಬೇಕೆಂದು ಕೋರುತ್ತೇವೆ.

೧. ಅರ್ಜಿದಾರರು ಅರ್ಜಿಯಲ್ಲಿ ಸುಳ್ಳು ವಿಚಾರಗಳನ್ನು ಹೇಳಿ ಆರ್ಥಿಕ ದೌರ್ಜನ್ಯವೆಸಗಲು ಪ್ರಯತ್ನಿಸಿರುತ್ತಾರೆ.
೨. ಅರ್ಜಿದಾರರು ೩ ಮತ್ತು ೪ ನೇ ರೆಸ್ಪಾಂಡೆಂಟರನ್ನು ಅರ್ಜಿಯಲ್ಲಿ ಪಾರ್ಟಿ ಮಾಡಿ ಎರಡನೇ ರೆಸ್ಪಾಂಡೆಂಟರ ಗಂಜಿಗೆ ಹೊಲಸನ್ನು ಹಾಕಲು ಪ್ರಯತ್ನಿಸಿ ದೌರ್ಜನ್ಯವೆಸಗಿರುತ್ತಾರೆ.
೩. ಅರ್ಜಿದಾರರು ಅರ್ಜಿಯಲ್ಲಿ ಎಲ್ಲಾ ವಿಚಾರಗಳನ್ನು ಸ್ಪಷ್ಟವಾಗಿ ತಿಳಿಸದೆ ಸಮಯ ಸಾದಕತನವನ್ನು ಪ್ರದರ್ಶಿಸಿ ರೆಸ್ಪಾಂಡೆಂಟರ ಉತ್ತರವನ್ನು ನೋಡಿ ಬಿನ್ನ ನಿಲುವನ್ನು ಪ್ರದರ್ಶಿಸಲು ಪ್ರಯತ್ನಿಸಿ ಕಾನೂನು ದುರ್ಬಳಕೆ ಮಾಡಿಕೊಂಡು ದೌರ್ಜನ್ಯವೆಸಗಿರುತ್ತಾರೆ.
೪. ಅರ್ಜಿದಾರರು ತಮ್ಮ ಕರ್ತವ್ಯವನ್ನು ಮರೆತು ಬಡತನದ ಬದುಕಿಗೆ ಅವಮಾನ ಮಾಡಿ ದೌರ್ಜನ್ಯವನ್ನು ಎಸಗಿರುತ್ತಾರೆ.
೫. ಅರ್ಜಿದಾರರು ತಮ್ಮ ಮದುವೆಯನ್ನು ತಿಪಟೂರಿನಲ್ಲಿ ಮಾಡಿಕೊಂಡಿರುವ ಕಾರಣದ ಬಗ್ಗೆ ಮತ್ತು ಅವರ ತಂದೆತಾಯಿಯ ಬಳಿ ಸ್ವಂತ ಮನೆ ಮತ್ತು ಜಮೀನು ಇರುವ ಬಗ್ಗೆ ಮತ್ತು ಅವರ ತಂದೆತಾಯಿಯ ಬಳಿ ಯಾರೂ ಬೇರೆ ವಾರಸ್ಸು ವಾಸ ಮಾಡುತ್ತಿಲ್ಲದಿರುವ ಬಗ್ಗೆ ವಿಚಾರವನ್ನು ಮರೆಮಾಚಿ ದೌರ್ಜನ್ಯವನ್ನು ಎಸಗಿರುತ್ತಾರೆ.

೬. ಅರ್ಜಿದಾರರು ದೈವೀ ಸಂಭೂತರಾದ ಸಿಸ್ಟರ್ (ಸನ್ಯಾಸಿನಿ) ರವರುಗಳ ಮೇಲೆ ಸಂಸಾರಿಕ ಬಂದಗಳನ್ನು ತೋರಿಸಿ ಕ್ಯಾಥೋಲಿಕ್ ಸಮುದಾಯದಿಂದಲೇ ನಮ್ಮನ್ನು ಹೊರಹಾಕಿಸುವ ಪ್ರಯತ್ನ ಮಾಡಿ ದೌರ್ಜನ್ಯವೆಸಗಿರುತ್ತಾರೆ.

೭. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ೨೧ ವರ್ಷ ಎಂದು ಸುಳ್ಳು ವಯಸ್ಸನ್ನು ತೋರಿಸಿರುತ್ತಾರೆ, ಆದರೆ ಅವರೇ ಘೋಷಿಸಿ ಕೊಂಡಿರುವ ಒಂದು ದಾಖಲೆಯಂತೆ ೨೫ ವರ್ಷವಿದ್ದು, ಸದರಿ ದಾಖಲೆಯು ಅರ್ಜಿದಾರರ ಅರೋಪದ ತಿರುಳನ್ನೇ ಬುಡಮೇಲು ಮಾಡುತ್ತದೆ. (ಅರ್ಜಿದಾರರು ಸದರಿ ಆರೋಪದ ಘಟನಾವಳಿ ತಾರೀಖುಗಳನ್ನು ನಿಖರವಾಗಿ ತಿಳಿಸಿದಲ್ಲಿ ಸದರಿ ದಾಖಲೆಯನ್ನು ಹಾಜರು ಪಡಿಸುತ್ತೇವೆ)

೮. ಅರ್ಜಿದಾರರು ಅರ್ಜಿಯನ್ನು ಹಾಕಿ ಈ ರೆಸ್ಪಾಂಡೆಂಟರಿಗೆ ಮಾನಸಿಕ ಹಿಂಸೆ ನೀಡುವ ಮುಖೇನ ದೌರ್ಜನ್ಯವೆಸಗಿರುತ್ತಾರೆ.

೯. ಇತರೆ ೩ ಮತ್ತು ೪ ರೆಸ್ಪಾಂಡೆಂಟರು ಅರ್ಜಿದಾರರ ಜೊತೆ ಆಗಲೀ ಈ ರೆಸ್ಪಾಂಡೆಂಟರ ಜೊತೆಯಾಗಲೀ ವಾಸ ಮಾಡದೆ ಇದ್ದರೂ, ಅವರನ್ನು ದುರುದ್ದೇಶದಿಂದ ಪಾರ್ಟಿಗಳನ್ನಾಗಿಸಿ ಮನೆಯಲ್ಲಿನ ಆರ್ಥಿಕ ಪರಿಸ್ಥಿತಿಯ ಗುಟ್ಟನ್ನು ರಟ್ಟುಗೊಳಿಸಿ, ದೌರ್ಜನ್ಯವನ್ನು ಎಸಗಿರುತ್ತಾರೆ.

೩೪. ಅರ್ಜಿದಾರರು ಸಲ್ಲಿಸಿರುವ ಅರ್ಜಿಗೆ ಪೂರಕವಾಗಿ ಯಾವುದೇ ದಾಖಲಾತಿಯಾಗಲೀ, ಸಮಯದಲ್ಲಿ ಸಹಜವಾಗಿ ಇರಬೇಕಾದ ರುಜುವಾತು ನಡವಳಿಕೆಯಾಗಲೀ, ವಿಸ್ತಾರವಾದ ಆರೋಪಿತ ಅಂಶಗಳಾಗಲೀ ಇಲ್ಲದಿರುವುದರಿಂದ, ಅರ್ಜಿಯು ಮೇಲ್ನೋಟಕ್ಕೆ ತಿರಸ್ಕಾರಕ್ಕೆ ಯೋಗ್ಯವಿರುತ್ತದೆ.

೩೫. ಪರಿಶುದ್ದ ಹಸ್ತದಿಂದ ಮಾನ್ಯ ನ್ಯಾಯಾಲಯದ ವಿವೇಚನಾಯುಕ್ತ ಆದೇಶವನ್ನು ಕೋರಬೇಕಾದ ವ್ಯಕ್ತಿಯು ಸತ್ಯಾಂಶವನ್ನು ಮರೆಮಾಚುವುದು, ಸುಳ್ಳನ್ನು ಪ್ರತಿಪಾದಿಸುವುದು ಕೇವಲ ರೆಸ್ಪಾಂಡೆಂಟರಿಗೆ ಅಥವ ಎದುರುದಾರರಿಗೆ ಎಸಗಿದ ಮೋಸಮಾತ್ರವೇ ಅಲ್ಲ ಅದು ಮಾನ್ಯ ನ್ಯಾಯಾಲಯಕ್ಕೂ ಮೋಸವೆಸಗಿದಂತೆ ಮತ್ತು ಮಾನ್ಯ ನ್ಯಾಯಾಲಯದ ಅಧಿಕಾರ ದುರುಪಯೋಗ ಮಾಡಿಕೊಂಡಂತೆ ಎಂಬ ನ್ಯಾಯ ಸಿದ್ದಾಂತವನ್ನು ಅರ್ಜಿದಾರರು ಕಡೆಗಾಣಿಸಿ ಉಲ್ಲಂಘಿಸಿದ್ದಾರೆ.

ಈ ಮೇಲ್ಕಂಡ ಕಾರಣಗಳಿಗೆ ಅರ್ಜಿದಾರರ ಅರ್ಜಿಯನ್ನು ಹೆಚ್ಚಿನ ದಂಡವನ್ನು ವಿದಿಸಿ, ಈ ರೆಸ್ಪಾಂಡೆಂಟರ ಮೇಲೆ ವಜಾಗೊಳಿಸಬೇಕೆಂದು ಕೋರುತ್ತೇವೆ. ಹಾಗೂ ಮೇಲೆ ಹೇಳಿದ

ಕಾರಣಗಳಿಗಾಗಿ ಕೋರಿರುವಂತೆ ಮಾನ್ಯ ನ್ಯಾಯಾಲಯದ ವಿವೇಚನಾಯುಕ್ತ ಆದೇಸದಂತೆ ಪರಿಹಾರವನ್ನು ಅರ್ಜಿದಾರರು ಎರಡನೇ ರೆಸ್ಪಾಂಡೆಂಟರಿಗೆ ಕೊಡುವಂತೆ ಆದೇಶಿಸಲು ಕೋರುತ್ತೇವೆ

**ದಿನಾಂಕ:** *೨೨-೧೦-೨೦೧೦*
**ಸ್ಥಳ: ಚನ್ನರಾಯಪಟ್ಟಣ** **೧ ನೇ ರೆಸ್ಪಾಂಡೆಂಟರು**

**೧ ಮತ್ತು ೨ ನೇ ರೆಸ್ಪಾಂಡೆಂಟರ ಪರ ವಕೀಲರು**

**ದೃಡೀಕರಣೆ**

೧ ನೇ ರೆಸ್ಪಾಂಡೆಂಟರಾದ ವಿಮಲ್ ಕುಮಾರ್ ಅಲಿಯಾಸ್ ವಿಮಲ್ ಆದ ನಾನು ಮತ್ತು ಎರಡನೇ ಪ್ರತಿವಾದಿಯಾದ ನನ್ನ ಸಾಕು ತಾಯಿಯ ಪರವಾಗಿಯೂ ಸಲ್ಲಿಸಿದ ತಕರಾರು ಇದಾಗಿರುತ್ತದೆ. ಈ ಮೇಲ್ಕಂಡ ವೃತ್ತಾಂತಗಳು ಸತ್ಯವೆಂದು ಧೃಡೀಕರಿಸುತ್ತೇನೆ.

**೧ ನೇ ರೆಸ್ಪಾಂಡೆಂಟರು**